ಅಡಿಗರು, ಅನಂತಮೂರ್ತಿ, ಶ್ರೀಕೃಷ್ಣ ಆಲನಹಳ್ಳಿ ಇವರೆಲ್ಲ ನವ್ಯದ ಜಾಯಮಾನವನ್ನು ರೂಪಿಸುತ್ತಿದ್ದರು. ನಾವು ಬರೆಯುವಾಗ ಒಂದು ಐಡಿಯಾಲಜಿಯಿಂದ ಪ್ರಭಾವಿತರಾಗುತ್ತೇವೆ, ಕ್ರಮೇಣ ನಮ್ಮದೇ ನೋಟಕ್ರಮ ಹಾಗೂ ಅಭಿವ್ಯಕ್ತಿ ಕ್ರಮಗಳು ರೂಪುಗೊಳ್ಳುತ್ತವೆ. ಅಲ್ಲಿಯೂ ಸ್ವತಂತ್ರಗೊಳ್ಳುತ್ತೇವೆ. ನಾನೂ ನವ್ಯಕ್ಕೆ ಸೀಮಿತ ಗೊಳ್ಳಲಿಲ್ಲ. ನಂತರ ನನ್ನ ಬರವಣಿಗೆಯಲ್ಲಿ ಸ್ತ್ರೀ ಸಂವೇದನೆಯ ಸೂಕ್ಷ್ಮಗಳು ಹೆಚ್ಚುಹೆಚ್ಚಾಗಿ, ವಿಭಿನ್ನ ಸ್ವರೂಪಗಳಲ್ಲಿ ಬೆರೆತವು.

**◆ ನೀವು 'ಗಂಡಸರು' ಮತ್ತು 'ಬಂಡಾಯ ಶೋಷಣೆ ಇತ್ಯಾದಿ' ಕೃತಿಗಳನ್ನು ಬರೆದಾಗ ಮಹಿಳೆಯರ ಬರವಣಿಗೆಯಲ್ಲಿ ಹೊಸ ತಿರುವು ಮೂಡಿತು. ಅವು ಮೈಲಿಗಲ್ಲು ನಿರ್ಮಾಣ ಮಾಡಿವೆ ಅನ್ನಿಸಿತ್ತು. ಆ ಕಾಲದಲ್ಲಿ ಯಾರೂ ಹಾಗೆ ಬರೆಯುವುದಿರಲಿ, ಯೋಚಿಸುವುದೂ ಸಾಧ್ಯವಿರಲಿಲ್ಲ. ಗಂಡು ಜಗತ್ತಿನ ಹಿಪಾಕ್ರಸಿಗಳನ್ನು ಹಾಗೆ ದಿಟ್ಟವಾಗಿ ತೆರೆದಿಡುವುದು ಸಾಮಾನ್ಯ ಸಂಗತಿಯಾಗಿರಲಿಲ್ಲ. ಹಿಂದಿರುಗಿ ನೋಡಿದಾಗ ನಿಮಗೇನನಿಸುತ್ತದೆ?**

ಶಿಕ್ಷಣ, ಬದಲಾವಣೆ ಅಂತೀವಿ, ಅದೇನೂ ಬದಲಾವಣೆ ತರಲಿಲ್ಲ. ಇಂದಿನ ಯುವಪೀಳಿಗೆ ನನ್ನ ಕಥೆಗಳನ್ನು ಓದಿ ಅದು ತುಂಬಾ ರೆಲೆವಂಟ್ ಅಂದಾಗ ನಿಜವಾಗಿ ನನಗೆ ಬೇಸರವಾಗುತ್ತದೆ, ಐವತ್ತು ಅರವತ್ತು ವರ್ಷಗಳಾದರೂ ಹೆಣ್ಣುಮಕ್ಕಳ ಪರಿಸ್ಥಿತಿ ಹಾಗೇ ಇದೆಯಲ್ಲ ಅಂತ.

ಹಾಗಾದರೆ ಬದಲಾವಣೆ ಎಂಬುದು ಕನಸೇ? ಇಂದಿಗೂ ಸಮಸ್ಯೆಗಳು ಹೊಸ ರೂಪದಲ್ಲಿ ಬರುತ್ತಿವೆಯೇ ಹೊರತೂ ಸಮಾಜದ ದೃಷ್ಟಿಕೋನಗಳ ಒಳರಚನೆಯಲ್ಲಿ ಮಹತ್ತರ ಬದಲಾವಣೆಗಳೇನೂ ಆಗಿಯೇ ಇಲ್ಲವೇ ಅಂತ ಆತಂಕವಾಗುತ್ತದೆ.



**◆ ನೀವು ಈ ಗಂಡು ಮನಃಸ್ಥಿತಿಯನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದ್ದಿರಿ. ಆದರೆ ಅದರಿಂದ ಗಂಡಸರೆಂದರೆ ದುಷ್ಟರು ಎಂಬ ಪಾರ್ಶ್ವಿಕ ನೋಟದ ನಿರ್ಮಾಣವಾಯಿತಾ? ಅಂಥ ಆಪಾದನೆಗಳಿಗೆ ಹೇಗೆ ಉತ್ತರಿಸುವಿರಿ? ಗಂಡು ಹೆಣ್ಣುಗಳಿಬ್ಬರನ್ನೂ ಅಸಹಜಗೊಳಿಸುವ ಪಿತೃಪ್ರಧಾನತೆಯೆಂಬ ವ್ಯವಸ್ಥೆಯನ್ನು ನಿರಚಿಸುವುದು ಸಾಧ್ಯವೇ?**

ನಾನೇನು ಪುರುಷದ್ವೇಷಿಯಲ್ಲ. ನಾನೂ ನನ್ನ ತಂದೆಯನ್ನು, ಅಣ್ಣ ತಮ್ಮಂದಿರನ್ನು, ಗಂಡ–ಮಕ್ಕಳನ್ನು, ವಿದ್ಯಾರ್ಥಿಗಳನ್ನು ಪ್ರೀತಿಸುವುದಿಲ್ಲವೇ? ನನ್ನ ಅನೇಕ ಸಮಕಾಲೀನ ಬರಹಗಾರರು ನನ್ನ ಆತ್ಮೀಯ ಗೆಳೆಯರೇ. ಅವರ ಬಗ್ಗೆ ನನಗೆ ಗೌರವವಿದೆ. ಎಲ್ಲ ಗಂಡಸರೂ ಕೆಟ್ಟವರೆಂಬುದು ನನ್ನ ನಿಲುವಲ್ಲ, ಅನೇಕ ಒಳ್ಳೆಯ ಗಂಡಸರು ನಮ್ಮ ಬದುಕಿನಲ್ಲಿರುತ್ತಾರೆ. ಅವರ ಬಗ್ಗೆ ನಾನು ಹೆಚ್ಚು ಬರೆದಿಲ್ಲವೇನೋ. ಆದರೆ ಬಹುತೇಕ ಗಂಡಸರ ಮೂಲಭೂತ ಸ್ವಭಾವದಲ್ಲೇ ಪುರುಷಶ್ರೇಷ್ಠತೆಯ ಪ್ರಜ್ಞೆಯಿರುತ್ತದೆ. ಅವರು ಹೆಂಗಸನ್ನು ತಮ್ಮ ತೃಪ್ತಿಗಾಗಿ ಇರುವ ವಸ್ತುವಾಗಿಯೇ ಭಾವಿಸುತ್ತಾರೆ. ಎರಡನೆಯ ದರ್ಜೆಯ ಜೀವಿಗಳನ್ನಾಗಿಯೇ ನೋಡುತ್ತಿರುತ್ತಾರೆ. ತಮ್ಮ ಸಂಗಾತಿಯೆಂದು ನೋಡುವವರು ಕಡಿಮೆ. ಅವಳಿಗೂ ತನ್ನದೇ ವ್ಯಕ್ತಿತ್ವವಿದೆ. ಆಲೋಚನೆಗಳಿವೆ. ಆಸೆಗಳಿವೆ ಎಂದು ನೋಡಲಾಗದ ಕುರುಡುತನವಿರುತ್ತದೆ. ಆ ಬೇಸಿಕ್ ಕ್ವಾಲಿಟಿ ಇನ್ನೂ ಬದಲಾಗದೇ ಹಾಗೆಯೇ ಇದೆ. ಇನ್ನು ಪಿತೃಪ್ರಧಾನ ವ್ಯವಸ್ಥೆಯನ್ನು ರೂಪಿಸಿಕೊಂಡವರೂ ಗಂಡಸರೇ ಅಲ್ಲವೇ? ಧರ್ಮ, ಶಾಸ್ತ್ರಗಳ ಮೂಲಕ ಅದನ್ನವರು ಕಾಯಂಗೊಳಿಸಿಕೊಂಡಿದ್ದಾರೆ. ಹೆಣ್ಣು–ಗಂಡನ್ನು ಸಮಗ್ರತೆಯಲ್ಲಿ ಸಂಪೂರ್ಣ ಅರ್ಥಮಾಡಿಕೊಂಡು ನಡೆವ ಪ್ರಬುದ್ಧತೆಯ ಗುಣ ಎಲ್ಲೋ ಎರಡು ಪ್ರತಿಶತ ಜನರಲ್ಲಿ ಇರಬಹುದು. ಇನ್ನೂ ಪುರುಷಪ್ರಧಾನ ಮನಃಸ್ಥಿತಿಯಲ್ಲಿ ಬದಲಾವಣೆಯಾಗಿಲ್ಲ. ಬದಲಾವಣೆಯಾಗಿರುವುದು ಹೆಂಗಸರಲ್ಲಿ. ಅವರಲ್ಲಿ ಒಂದು ವಿಶೇಷ ಜಾಗೃತಿಯುಂಟಾಗುತ್ತಿದೆ. ಎರಡೂ ಕಡೆ ಜಾಗೃತಿಯುಂಟಾದಾಗ ಮಾತ್ರ ಎಲ್ಲೆಗಳು ಕಳಚಿ ಬೀಳುತ್ತವೆ.